


ಚಿತ್ರಗಳು: ಸೃಜನ್

## ಕಥನ ಸ್ವರೂಪ ಬದಲಾಯಿತೇ?

ಪೂರ್ಣವಾಗಿ ಬದಲಾಯಿತು ಎನ್ನಲಿಕ್ಕೆ ಸಾಧ್ಯವಿಲ್ಲ. ಈ ಶತಮಾನದ ಉತ್ತಮ, ಶ್ರೇಷ್ಠ ಎಂದು ಪ್ರಚಲಿತದಲ್ಲಿರುವ ಭಾರತೀಯ ಕೃತಿಗಳೂ ಕೂಡ ಮೇಲೆ ತಿಳಿಸಿದಂತೆ ಋಣದಲ್ಲಿರುವುದು ಕಂಡುಬರುತ್ತದೆ. ಆದರೆ ಪಾಶ್ಚಾತ್ಯ ಸಾಹಿತ್ಯದ ಓದು ಹೆಚ್ಚಾದಂತೆ ಕಥನ ಸ್ವರೂಪಕ್ಕೆ ತಮ್ಮದೇ ವ್ಯಾಖ್ಯಾನಗಳನ್ನು ಸಾಹಿತಿಗಳು ನೀಡುತ್ತಾ ಹೋದರು. ಒಂದಷ್ಟು ಜನ ಅನುಭವವೇ ಅಂತಿಮ ಎಂದರು, ಈ ಋಣವನ್ನು ತಿರಸ್ಕರಿಸುವುದೇ ಹೊಸ ಕಥನ ಸ್ವರೂಪ ಎಂದರು, ಸಾಮಾಜಿಕ ಕ್ರಾಂತಿಯೇ ಕಥನದ ಉದ್ದೇಶ ಎಂದರು. ಏನೇ ಆದರೂ ಕಥನವು ಮನುಷ್ಯನನ್ನು ಬಿಟ್ಟು ಕದಲಲಿಲ್ಲ. ಆದ್ದರಿಂದಲೇ... ಮನುಷ್ಯ ಭಾವ ಮತ್ತು ಸಂಬಂಧಗಳ ಸೂಕ್ಷ್ಮಗಳನ್ನು ಸಂಶೋಧಿಸುತ್ತಾ ಸಾಗುವುದೇ ನಿಜ ಕಥನವೇ ಹೊರತು ಮಿಕ್ಕೆಲ್ಲ ಧೋರಣೆಗಳು ಅದರ ಹೊದಿಕೆಗಳಷ್ಟೇ ಎಂದೆನ್ನಬೇಕಾಗುತ್ತದೆ. ಮತೀಯ ಕಥನ, ರಾಜಕೀಯ ಕಥನ, ಸಾಮಾಜಿಕ ಕ್ರಾಂತಿಯ ಕಥನ, ಅಸಮಾನತೆಯ ಕಥನ ಇವೆಲ್ಲವೂ ಮನುಷ್ಯನ ಉಚ್ಚ, ನೀಚ ಭಾವಗಳ ಸಂಶೋಧನೆಯೇ ಅಲ್ಲವೇ? ಮನುಷ್ಯ ಸಂಬಂಧಗಳ ಹುಡುಕಾಟವಲ್ಲವೇ? ಹಾಗಾದರೆ ನಿಜವಾಗಲೂ ನಾವು ಈ ನಿಟ್ಟಿನಲ್ಲಿ ಕಥನ ಸ್ವರೂಪಗಳನ್ನು ಪರಾಮರ್ಶಿಸಿದ್ದೀವ? ಯಾವುದೇ ಕಲೆಯಾಗಲಿ ಅದು ಮನುಷ್ಯನಿಗೆ ಪ್ರತಿಯಾಗಿ ಇದನ್ನಲ್ಲದೇ ಇನ್ನೇನನ್ನು ಕೊಡುತ್ತಿದೆ? ಎಂದು ಕೇಳಿಕೊಳ್ಳಬೇಕಾಗುತ್ತದೆ.

## ಕಥನದ ಸ್ವರೂಪ ಈಗ ಏನಾಗುತ್ತಿದೆ?

ಸಿನಿಮಾ, ವೆಬ್ ಸೀರಿಯಲ್, ಪೋಡ್‌ಕಾಸ್ಟ್ ಹೀಗೆ ಕಥನದ ಮಾಧ್ಯಮಗಳು ಬದಲಾಗಿರಬಹುದು. ಆದರೆ ಅದಕ್ಕೆ ಸಾಹಿತ್ಯವೇ ಮೂಲಧಾತು. ಭಾಷೆ ಮತ್ತು ದೃಶ್ಯವನ್ನು ಬಳಸುವ ಪ್ರತಿಯೊಂದು ಕಲೆಯು ಸಾಹಿತ್ಯವೇ. ಆ ಸಾಹಿತ್ಯದಲ್ಲಿ ಕಥನ ಸ್ವರೂಪವು ಮೇಲೆ ತಿಳಿಸಿದ ಆದರ್ಶದಂತೆ ರೂಪುಗೊಳ್ಳುವ ಪ್ರಯತ್ನವನ್ನಾದರು ಮಾಡಿದೆಯೇ ಇಲ್ಲವೇ ಎಂಬುದು ಸದ್ಯದ ಪ್ರಶ್ನೆ. ಇಲ್ಲಿ ಬೋಧಕ, ರಂಜಕ, ಸಿದ್ಧಾಂತ ಪ್ರತಿಪಾದಕ, ಸ್ವರತಿ ಹೀಗೆ ಹಲವಾರು ವಿಭಿನ್ನ ಕಥನಗಳಿದೆ. ಜನಕ್ಕೆ ಏನು ಬೇಕು ಅದಕ್ಕೆ ತಕ್ಕಂತೆ ಕೊಡುತ್ತೇವೆ ಎಂಬ ವ್ಯವಹಾರದ (ಆರ್ಥಿಕ ದೃಷ್ಟಿ ಮಾತ್ರವಲ್ಲ, ಸಮಾನ ಮನೋಧರ್ಮದ ವ್ಯಾಪಾರ ಎಂಬಂತೆಯೂ) ಮೇಲೆ ಸಾಹಿತ್ಯವನ್ನು ಸ್ಥಾಪಿಸಿದಾಗ ಇವೆಲ್ಲಾ ಹುಟ್ಟುಕೊಳ್ಳುತ್ತವೆ. ನಮ್ಮ ಪ್ರಜ್ಞೆಯನ್ನು ಜಾಗೃತಗೊಳಿಸಿದಂತ, ರಸ ಮತ್ತು ಮೌಲ್ಯ ಹದಗೆಡದಂತೆ